**ಓ.ಎಸ್. ನಂ. 120/2017** **ಡಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 30.3.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. 19 ಗಣಕೀಕೃತ ಪಹಣಿಗಳನ್ನು ನಿಡಿ2 ರಿಂದ ನಿಡಿ20 ಎಂದು, ಏಳು ಕೈಬರಹ ಪಹಣಿಗಳ ದೃಢೀಕೃತ ನಕಲನ್ನು ನಿಡಿ21 ರಿಂದ ನಿಡಿ27 ಎಂದು, ಆಕಾರ ಬಂಧು ನಮೂನೆ-5 ರ ದೃಢೀಕೃತ ನಕಲನ್ನು ನಿಡಿ28 ಎಂದು, ಎರಡು ಸೆಟಲ್‌ಮೆಂಟ್ ಆಕಾರ ಬಂಧುವಿನ ದೃಢೀಕೃತ ನಕಲನ್ನು ನಿಡಿ29 ಮತ್ತು ನಿಡಿ30 ಎಂದು, ಸರ್ವೆ ನಂ.20 ಮತ್ತು 67 ರ ಕರ್ತಾ ಯಥಾ ನಕಲನ್ನು ನಿಡಿ31 ಮತ್ತು ನಿಡಿ32 ಎಂದು, ದಿನಾಂಕ 28.1.1980 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಡಿ33 ಎಂದು, ದಿನಾಂಕ 7.2.1974 ರ ಕ್ರಯಪತ್ರವನ್ನು ನಿಡಿ34 ಎಂದು, ದಿನಾಂಕ 10.8.1992 ರಂದು ಹೆಚ್.ಡಿ.ಕೋಟೆಯ ಭೂ ನ್ಯಾಯ ಮಂಡಳಿಯವರು ನೀಡಿರುವ ಹಿಂಬರಹದ ದೃಢೀಕೃತ ನಕಲನ್ನು ನಿಡಿ35 ಎಂದು, ನನ್ನ ಚಿಕ್ಕಪ್ಪನಾದ ನಂಜಪ್ಪ ರವರ ಮರಣ ಪ್ರಮಾಣಪತ್ರವನ್ನು ನಿಡಿ36 ಎಂದು, ಮೂರು ಡಿಮ್ಯಾಂಡ್ ರಿಜಿಸ್ಟರಿನ ದೃಢೀಕೃತ ನಕಲನ್ನು ನಿಡಿ37 ರಿಂದ ನಿಡಿ39 ಎಂದು, ಒಂದು ತೆರಿಗೆ ಪಾವತಿ ರಶೀದಿಯ ದೃಢೀಕೃತ ನಕಲನ್ನು ನಿಡಿ40 ಎಂದು, ಹೆಚ್.ಡಿ.ಕೋಟೆ ಶಾಖೆಯ ವಿಜಯ ಬ್ಯಾಂಕ್ ಪಾಸ್‌ಬುಕ್ಕಿನ ದೃಢೀಕೃತ ನಕಲನ್ನು ನಿಡಿ41 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.